# ‘ಲಿವಿಂಗ್ ಟುಗೆದರ್ ಆಕೆಗಿಷ್ಟ’



◆ ಏನೋ ಮಾಡಬೇಕಿತ್ತು, ಇನ್ನೇನೋ ಮಾಡುತ್ತಿದ್ದೇನೆ ಎಂದೆನಿಸಿದೆಯಾ?

ಚಿಕ್ಕಂದಿನಲ್ಲೇ ಭರತನಾಟ್ಯ ಕಲಿಯುತ್ತಿದ್ದೆ. ಅಲ್ಲಿ ಪವಿತ್ರಾ ಲೋಕೇಶ್, ಮಂಡ್ಯ ರಮೇಶ್ ಬರ್ತಾ ಇದ್ರು. ಆ ಸಂಸ್ಥೆಯಲ್ಲಿ ಡಾನ್ಸ್ ಜೊತೆ ನಟನೆಯನ್ನು ಕಲಿಸುತ್ತಿದ್ದರು. ನಾನು ನಟನೆ ಕಲಿಯಲಿಲ್ಲ. ಅಲ್ಲಿನ ವಾತಾವರಣ ನಟನೆಯ ಒಲವು ಮೂಡಿಸಿತು. ಓದು ಮುಗಿದ ನಂತರ ಮಾಡೆಲಿಂಗ್ ಆರಂಭಿಸಿದೆ. ಆಮೇಲೆ ನಟನೆ ಮಾಡುತ್ತಿದ್ದೇನೆ. ಬಾಲ್ಯದಲ್ಲಿ ಪೈಲಟ್ ಆಗುವ ಕನಸೂ ಇತ್ತು. ಕಾರಣಾಂತರಗಳಿಂದ ಮಾಡಲು ಆಗಲಿಲ್ಲ. ಆದರೆ ಎನ್‌ಸಿಸಿಯಲ್ಲಿ ಇದ್ದಾಗ ಬೆಂಗಳೂರಿನ ಜಕ್ಕೂರು ಏರ್‌ಫೀಲ್ಡ್‌ನಲ್ಲಿ ತರಬೇತಿ ಪಡೆದಿದ್ದೇನೆ. ಎನ್‌ಸಿಸಿ ಅಂತರ ರಾಜ್ಯ ಸ್ಪರ್ಧೆ ಇತ್ತು. ಕರ್ನಾಟಕ– ಗೋವಾ ರಾಜ್ಯವನ್ನು ನಾನು ಪ್ರತಿನಿಧಿಸಿದ್ದೆ. ಮೈಕ್ರೋ ಲೈಟ್ ಏರ್‌ಕ್ರಾಫ್ಟ್ ಚಾಲನೆಯನ್ನು ಕಲಿತಿದ್ದೇನೆ. ನಿಯಮಿತ ತರಬೇತಿಯಲ್ಲಿ 14 ಗಂಟೆ ಪುಟ್ಟ ಏರ್‌ಕ್ರಾಫ್ಟ್‌ಅನ್ನು ನಾನೇ ಹಾರಿಸಿದ್ದೇನೆ.

◆ ನಿಕಿತಾ ಬಗ್ಗೆ ಹೇಳುವುದಾದರೆ...

ಟೀನಾಳಿಗೆ ಸಂಪೂರ್ಣ ವಿರುದ್ಧವಿರುವ ಗುಣದವಳು. ನಾನು ತುಂಬ ಸ್ನೇಹ ಜೀವಿ. ಎಲ್ಲರ ಜೊತೆ ಬೆರೆತು ಬಾಳುವುದು ಇಷ್ಟ. ಮಂಗಳೂರು– ಮೈಸೂರಿನಲ್ಲಿ ಬೆಳೆದಿದ್ದೇನೆ. ಹುಟ್ಟೂರು ಉಪ್ಪಿನಂಗಡಿ. ಎಂಸಿಎ ಓದಿದ್ದೇನೆ. ತಂದೆ ಧರಣಪ್ಪ ಜಿ. ದೊರ್ತೋಡಿ, ಇಂಡಿಯನ್ ಏರ್ ಫೋರ್ಸ್‌ನಲ್ಲಿ ಎಂಜಿನಿಯರ್ ಆಗಿದ್ದರು. ನಂತರ ಎಚ್‌ಎಎಲ್‌ನಲ್ಲಿ ಹೆಲಿಕಾಪ್ಟರ್ ಎಂಜಿನಿಯರ್ ಆಗಿದ್ದರು. ಈಗ ನಿವೃತ್ತರಾಗಿದ್ದಾರೆ. ಅಮ್ಮ ಸುಕನ್ಯಾ ಗೃಹಿಣಿ. ತಂಗಿ ಎಂಜಿನಿಯರಿಂಗ್ ಮುಗಿಸಿ ನೌಕಾಪಡೆ ಸೇರುವ ಪ್ರಯತ್ನದಲ್ಲಿದ್ದಾಳೆ. ಪೋಷಕರು ಆರಂಭದಲ್ಲಿ ನನ್ನ ನಟನೆಯ ಬಯಕೆ ಬಗ್ಗೆ ಆಕ್ಷೇಪ ಮಾಡಿದರು. ಅವಳ ಆಸಕ್ತಿ ಇದೇ ಕ್ಷೇತ್ರದಲ್ಲಿ ಇದೆ ಎನ್ನುವುದು ಗೊತ್ತಾದ ಮೇಲೆ ಯಾವತ್ತೂ ಅಡ್ಡಿ ಮಾಡಲಿಲ್ಲ.

**ನಿಕಿತಾ ದೊರ್ತೋಡಿ ಸ್ಟಾರ್ ಸುವರ್ಣದ ‘ಸತ್ಯಂ ಶಿವಂ ಸುಂದರಂ’ನ ಟೀನಾ**

◆ ಲಿವಿಂಗ್ ಟುಗೆದರ್ ಬಗ್ಗೆ ನಿಮಗೆ ಇರುವ ಅಭಿಪ್ರಾಯವೇನು?

ಲಿವಿಂಗ್ ಟುಗೆದರ್ ಇಬ್ಬರಿಗೆ ಸಂಬಂಧಪಟ್ಟ ಖಾಸಗಿ ವಿಷಯ. ಅವರ ಜೀವನದ ಆಯ್ಕೆಗೆ ನಾವು ಆ ರೀತಿ ಇರಬಾರದು ಹೀಗಿರಬೇಕೆಂದು ಹೇಳುವುದು ತಪ್ಪು. ಅವರ ಬದುಕನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ಅವರಿಗಿದೆ. ಜೀವನದ ಬಗ್ಗೆ ಸ್ಪಷ್ಟತೆ ಇದ್ದೇ ಆ ಆಯ್ಕೆಯನ್ನು ಮಾಡಿಕೊಂಡಿದ್ದರೆ ತಪ್ಪೇನೂ ಇಲ್ಲ. ಕೆಲವರಿಗೆ ವೃತ್ತಿ ಜೀವನ ಬಹಳ ಮುಖ್ಯ ಅನ್ನಿಸುತ್ತದೆ. ಆ ಕ್ಷೇತ್ರದಲ್ಲೇ ಅದ್ವಿತೀಯ ಸಾಧನೆ ಮಾಡಬೇಕು ಎನ್ನುವ ವಿಚಾರ ಅವರದು. ಆಗ ಮದುವೆ ಬಂಧನದಂತೆ ಅನಿಸಬಹುದು. ಕೌಟುಂಬಿಕ ಜವಾಬ್ದಾರಿಗಳು ಅವರಿಗೆ ಅನಪೇಕ್ಷಿತ ಆಗಬಹುದು. ಮಕ್ಕಳು, ಹಿರಿಯರನ್ನು ನೋಡಿಕೊಳ್ಳುವುದರಲ್ಲೇ ತಮ್ಮ ವೃತ್ತಿಬದುಕು ಕಳೆಯಬಾರದು. ಕುಟುಂಬದ ಕಟ್ಟುಕಟ್ಟಳೆಯಿಂದ ಹೊರ ಇದ್ದು ಒಬ್ಬ ಸಂಗಾತಿ ಜೊತೆ ಇರಬೇಕು ಎಂದು ಬಯಸುತ್ತಾರೆ. ಅವರಿಗೆ ಇಷ್ಟವಾಗುವವರ ಜೊತೆ ಸಹಜೀವನ ಮಾಡುತ್ತಾರೆ ಅಷ್ಟೇ. ವೈಯಕ್ತಿಕವಾಗಿ ನನಗೆ ಲಿವಿಂಗ್ ಟುಗೆದರ್ ಇಷ್ಟ ಆಗುವುದಿಲ್ಲ. ನಾನು ನಿರ್ವಹಿಸುವ ಪಾತ್ರದ ವೈರುಧ್ಯ ಮನೋಧರ್ಮ ನನ್ನದು. ನನಗೆ ತುಂಬಿದ ಕುಟುಂಬದ ಜೊತೆ ಇರುವುದು ಇಷ್ಟ.

◆ ಸಾಹಸ ಮನೋಭಾವದ ನಿಮಗೆ ಸಾಧನೆಯ ಗುರಿ ಯಾವುದು?

ನನಗೆ ಒಂದೇ ರೀತಿ ಇರುವುದು ಜಡ ಅನ್ನಿಸುತ್ತದೆ. ಸ್ಥಿರವಾಗಿ ಇರದೆ ಕ್ರಿಯಾಶೀಲವಾಗಿರಬೇಕು. ನಿರಂತರ ಹೊಸತನ್ನು ಮಾಡಬೇಕು. ನನಗೆ ನಾನೇ ಅಚ್ಚರಿ ಅನ್ನಿಸುವಂತೆ ಭಿನ್ನ ಭಿನ್ನ ಕೆಲಸಗಳನ್ನು ಮಾಡಬೇಕು. ನಾನು ಕಲಿಯುತ್ತಾ ಬೆಳವಣಿಗೆ ಆಗ್ತಾ ಇರಬೇಕು. ನನಗೆ ಲಭ್ಯವಾಗುವ ಸಂಪನ್ಮೂಲಗಳನ್ನು ಬಳಸಿ ನನ್ನಿಂದ ಸಾಧ್ಯ ಆಗುವುದನ್ನೆಲ್ಲಾ ಮಾಡಬೇಕು. ಯಾವುದೇ ಕೆಲಸವನ್ನೂ ಪ್ರಯತ್ನ ಮಾಡದೆ ಅಗಲ್ಲ ಎಂದು ನಿರ್ಧಾರ ಮಾಡಲ್ಲ. ಸಿನಿಮಾಗಳಿಗೂ ಅವಕಾಶ ಬರ್ತಾ ಇವೆ. ಒಳ್ಳೆಯ ಸ್ಕ್ರಿಪ್ಟ್‌ಗೆ ಕಾಯುತ್ತಿದ್ದೇನೆ. ಆರಂಭ ಒಳ್ಳೆಯ ಬುನಾದಿ ಹಾಕುವಂತೆ ಇರಲಿ ಎಂದುಕೊಂಡಿದ್ದೇನೆ. ‘ಭರತ ಬಾಹುಬಲಿ’ ಸಿನಿಮಾದಲ್ಲಿ ಮನೋಶಾಸ್ತ್ರಜ್ಞೆಯಾಗಿ ಚಿಕ್ಕ ಪಾತ್ರ ಮಾಡಿದ್ದೇನೆ. ಚೇತನ್ ಮುಂಡಾಡಿ ಅವರ ಕಲಾತ್ಮಕ ಸಿನಿಮಾದಲ್ಲಿ ಸಣ್ಣ ಪಾತ್ರ ಮಾಡಿದ್ದೇನೆ. ಈವರೆಗೆ ಪ್ರಧಾನ ಪಾತ್ರವನ್ನು ಮಾಡಿಲ್ಲ. ಇದೇ ನನ್ನ ಮೊದಲ ಧಾರಾವಾಹಿ.

◆ ಮಾರ್ಡನ್ ಹುಡುಗಿ ಟೀನಾ ಹೇಗಿದ್ದಾಳೆ ಎಂದು ನಿಮಗನಿಸುತ್ತದೆ?

ಟೀನಾ ಮುಂಬೈಯಿಂದ ಓದುವ ಸಂಬಂಧ ಬೆಂಗಳೂರಿಗೆ ಬಂದಿದ್ದಾಳೆ. ಆಕೆ ಅವರಪ್ಪನ ಗೆಳೆಯ ಆದಿತ್ಯ ಎನ್ನುವವರ ಮನೆಯಲ್ಲೇ ಇದ್ದಾಳೆ. ಅವರಪ್ಪ ದೊಡ್ಡ ಉದ್ಯಮಿ. ಆದಿತ್ಯ ಅವರಿಗೆ ತಮ್ಮ ಎರಡನೇ ಮಗನಿಗೆ ಅವಳನ್ನು ಸೊಸೆಯಾಗಿ ತಂದುಕೊಳ್ಳಬೇಕು ಎನ್ನುವ ಆಲೋಚನೆ. ಆಕೆ ಮೂರನೇ ಮಗನನ್ನು ಇಷ್ಟಪಡುತ್ತಿದ್ದಾಳೆ. ಎಲ್ಲರೂ ಎರಡನೇ ಮಗ ಸತ್ಯನನ್ನೇ ಇಷ್ಟಪಡುತ್ತಾಳೆ ಎಂದುಕೊಂಡಿದ್ದಾರೆ. ಆಕೆ ಸ್ಯಾಂಡಿ (ಸುಂದರ್)ಯನ್ನು ಮೆಚ್ಚಿದ್ದಾಳೆ ಎನ್ನುವ ಸಂಗತಿ ಯಾರಿಗೂ ಗೊತ್ತಿಲ್ಲ. ಆಕೆ ತುಂಬ ಬೋಲ್ಡ್, ಜಂಬವಿಲ್ಲದ ಹುಡುಗಿ. ಭಾರತೀಯ ಸಂಪ್ರದಾಯ ಇಷ್ಟ ಆಗುವುದಿಲ್ಲ. ಪಾಶ್ಚಿಮಾತ್ಯ ಆಕರ್ಷಣೆ ಇರುವ ಆಕೆ ದೇವರ ಪೂಜೆ ಪುನಸ್ಕಾರದ ಬಗ್ಗೆಯೂ ನಂಬಿಕೆ ಇಲ್ಲ. ಮದುವೆಯೂ ಕೂಡ ಇಷ್ಟ ಇಲ್ಲ. ಲಿವಿಂಗ್ ಟುಗೆದರ್ ಜೀವನ ಇಷ್ಟ. ಯಾರ ನಿಯಂತ್ರಣವೂ ಇಲ್ಲದೆ ಮುಕ್ತವಾಗಿ ತನ್ನ ಜೀವನ ಮಾಡಬೇಕು ಎಂದುಕೊಳ್ಳುವ ಅವಳಿಗೆ ದುಷ್ಟತನ ಇಲ್ಲವೇ ಇಲ್ಲ.

■ **ರಾಘವೇಂದ್ರ ಕೆ.**